# ಧರ್ಮ ಮತ್ತು ಅಂಬೇಡ್ಕರ್

**ಗಣೇಶ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹೆಗ್ಗಡದೇವನಕೋಟೆ, ಮೈಸೂರು.

DOI: https://doi.org/10.5281/zenodo.15504212

## ABSTRACT:

ಅಂಬೇಡ್ಕರ್ ಭಾರತದ ಒಬ್ಬ ಶ್ರೇಷ್ಠ ಪ್ರತಿಭಾವಂತ ಬುದ್ಧಿ ಜೀವಿ ಮತ್ತು ಮೇಧಾವಿ. ಪ್ರಪಂಚದ ಅಪ್ರತಿಮ ಚಿಂತಕರ ಸಾಲಿನಲ್ಲಿ ನಿಲ್ಲಬಲ್ಲ, ಮೇರು ವ್ಯಕ್ತಿತ್ವವುಳ್ಳ ಚಿಂತನಶೀಲ ವ್ಯಕ್ತಿ. ಅವರು ಜಗತ್ತಿನ ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಆಸಕ್ತಿ ಮತ್ತು ಕುತೂಹಲದಿಂದ ಅಮೂಲಾಗ್ರವಾಗಿ ಅಧ್ಯಯನ ಮಾಡಿದ್ದರು. ಧರ್ಮವನ್ನು ಕುರಿತಂತೆ ರಾಬರ್ಟ್ ಸನ್ ಸ್ಮಿತ್ ಅವರ ಪರಿಕಲ್ಪನೆಯನ್ನು ಅಂಬೇಡ್ಕರ್ ಹಿಂದೂ ಧರ್ಮದ ತತ್ವಜ್ಞಾವನ್ನು ಕುರಿತ ತಮ್ಮ ಕೃತಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. ಧರ್ಮ ಯಾವುದೇ ಕಾರಣಕ್ಕೂ ದುರ್ಬಲರನ್ನು ಶೋಷಿಸುವ ಅಸ್ತ್ರವಾಗಬಾರದು. ಹಿಂದೂ ಧಾರ್ಮಿಕ ವ್ಯವಸ್ಥೆಯಲ್ಲಿ ದೈವಿಕ ಪ್ರಭುತ್ವದ ಲಿಖಿತ ಸಂವಿಧಾನ ಮತ್ತು ಪುರೋಹಿತಶಾಹಿಯ ಅಘೋಷಿತ ಪ್ರಾಬಲ್ಯವನ್ನು ಕಾಪಾಡಿಕೊಂಡು ಬರಲಾಗಿದೆ. ಈ ಧರ್ಮದಲ್ಲಿ ಬಹುಸಂಖ್ಯಾತ ಹಿಂದುಳಿದ ಸಮುದಾಯಗಳ ಜನತೆ ಸಮಾನತೆಯಿಂದ ವಂಚಿತರಾಗಿದ್ದಾರೆ. ಇಂತಹ ಧಾರ್ಮಿಕ ಕಟ್ಟುಪಾಡುಗಳು ಭಾರತೀಯ ಸಮಾಜದಲ್ಲಿ ಬಹುಜನ ಬಂಧುಗಳಿಗೆ ಉಸಿರು ಕಟ್ಟಿಸುವಂತಹ ವಾತಾವರಣವನ್ನು ನಿರ್ಮಿಸಿವೆ.

ಧರ್ಮ ಯಾವುದೇ ಕಾರಣಕ್ಕೂ ದುರ್ಬಲರನ್ನು ಶೋಷಿಸುವ ಅಸ್ತ್ರವಾಗಬಾರದು. ಹಿಂದೂ ಧಾರ್ಮಿಕ ವ್ಯವಸ್ಥೆಯಲ್ಲಿ ದೈವಿಕ ಪ್ರಭುತ್ವದ ಲಿಖಿತ ಸಂವಿಧಾನ ಮತ್ತು ಪುರೋಹಿತಶಾಹಿಯ ಅಘೋಷಿತ ಪ್ರಾಬಲ್ಯವನ್ನು ಕಾಪಾಡಿಕೊಂಡು ಬರಲಾಗಿದೆ. ಈ ಧರ್ಮದಲ್ಲಿ ಬಹುಸಂಖ್ಯಾತ ಹಿಂದುಳಿದ ಸಮುದಾಯಗಳ ಜನತೆ ಸಮಾನತೆಯಿಂದ ವಂಚಿತಾಗಿದ್ದಾರೆ. ಇಂತಹ ಧಾರ್ಮಿಕ ಕಟ್ಟುಪಾಡುಗಳು ಭಾರತೀಯ ಸಮಾಜದಲ್ಲಿ ಬಹುಜನ ಬಂಧುಗಳಿಗೆ ಉಸಿರು ಕಟ್ಟಿಸುವಂತಹ ವಾತಾವರಣವನ್ನು ನಿರ್ಮಿಸಿವೆ. ಹಿಂದೂಧರ್ಮದ ಸಿದ್ಧಾಂತಗಳನ್ನು ವಂಶಪಾರಂಪರ್ಯವಾಗಿ ಪಡೆಯುವ ಚರಾಸ್ತಿಯಂತೆ ವೈದಿಕಶಾಹಿ ಸಂರಕ್ಷಿಸಿದೆ. ಇಂತಹ ಧರ್ಮ ಪ್ರಕೃತಿ ಧರ್ಮಕ್ಕೆ ತದ್ವಿರುದ್ಧವಾಗಿದೆ.

## KEYWORDS:

ಅಂಬೇಡ್ಕರ್, ಧರ್ಮ, ಹಿಂದೂ, ಶೋಷಣೆ, ವೈದಿಕಶಾಹಿ, ವಚನ ಚಳವಳಿ.

**ದಯೆಯಿಲ್ಲದ ಧರ್ಮವಾವುದಯ್ಯ**
**ದಯೆ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ**
**ದಯೆಯೇ ಧರ್ಮದ ಮೂಲವಯ್ಯ**
**ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ**

"ದಯೆ ಇಲ್ಲದ ಧರ್ಮ ಯಾವುದಯ್ಯ" ಎಂದು 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣ ತಮ್ಮ ವಚನವೊಂದರಲ್ಲಿ ಪ್ರಶ್ನೆ ಮಾಡುತ್ತಾರೆ. ಮುಂದುವರೆದು 'ದಯೆ' ಬೇಕು ಸಕಲ ಪ್ರಾಣಿಗಳಲ್ಲಿ ಎನ್ನುತ್ತಾರೆ.

ಧರ್ಮ ಎಂದರೆ ಒಂದು ಜೀವನ ಕ್ರಮ. "ಧರ್ಮ ಎಲ್ಲವನ್ನೂ ರಕ್ಷಿಸುತ್ತದೆ; ಧರ್ಮದಿಂದಲೇ ಸಮಸ್ತ ಲೋಕ ಅಳಿಯದೆ ಉಳಿದಿದೆ" ಎಂದು ಮಹಾಭಾರತದ ಶಾಂತಿ ಪರ್ವದಲ್ಲಿ ಉಲ್ಲೇಖಿಸಲಾಗಿದೆ. ಧರ್ಮ ಎನ್ನುವುದು ವ್ಯಕ್ತಿಯ ಅಥವಾ ಸಮಾಜದ ಅನೇಕ ಸಂಗತಿಗಳನ್ನು ಒಗ್ಗೂಡಿಸುವ ಒಂದು ವ್ಯವಸ್ಥೆ ಎಂದು ಕರೆಯುತ್ತಾರೆ. ಧರ್ಮ ಎಂದರೆ ಮನುಷ್ಯರನ್ನು ಒಗ್ಗಟ್ಟು ಮಾಡುವುದು ಎಂದರ್ಥ. ಭಾರತೀಯ ಸಂಸ್ಕೃತಿಯಲ್ಲಿ 'ಧರ್ಮ' ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಒಬ್ಬ ವ್ಯಕ್ತಿ ತನ್ನ ಕುಟುಂಬಕ್ಕೆ, ಸಮಾಜಕ್ಕೆ ಮತ್ತು ದೇಶಕ್ಕೆ ಮಾಡಬೇಕಾದ ಕರ್ತವ್ಯಗಳು ಮತ್ತು ನಿಯಮಗಳಿಗೆ 'ಧರ್ಮ' ಎಂದು ಕೆಲವರು ಸೂಚಿಸುತ್ತಾರೆ.

ಧರ್ಮದಲ್ಲಿ ನೀತಿಮಾರ್ಗ, ಶೀಲಮಾರ್ಗ ಮತ್ತು ಉತ್ತಮ ಮಾರ್ಗಗಳು ಮನುಷ್ಯನ ಜೀವನ ಪದ್ಧತಿಯನ್ನು ಉಳಿಸಿಕೊಂಡು ಬರುತ್ತಿದೆ ಎನ್ನಲಾಗಿದೆ. ವಿಶ್ವದಲ್ಲಿ ಒಂದೇ ತೆರನಾದ ಜೀವನ ಸಂಸ್ಕೃತಿಯನ್ನು ಅನುಸರಿಸುತ್ತಿಲ್ಲ. ತನ್ನ ಭಾಷೆ, ಜೀವನ ಪದ್ಧತಿ, ಸಂಸ್ಕೃತಿ ತಕ್ಕಂತೆ ಮಾನವ ತನ್ನ ವಿಧಿ ವಿಧಾನಗಳಿಗಾಗಿ ಧರ್ಮಗಳನ್ನು ರೂಪಿಸಿಕೊಂಡಿರುತ್ತಾನೆ. ಹೀಗಾಗಿ ಪ್ರಪಂಚದಲ್ಲಿ ಅನೇಕ ಧರ್ಮಗಳನ್ನು ಮನುಷ್ಯ ಸೃಷ್ಟಿಸಿದ್ದಾನೆ.

ಜಾಗತಿಕವಾಗಿ ಹಿಂದೂ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ, ಪಾರ್ಸಿ ಹೀಗೆ ಅನೇಕ ಧರ್ಮಗಳು ಇವೆ. ಎಲ್ಲಾ ಧರ್ಮಗಳೂ ಮಾನವನಲ್ಲಿ ಆಧ್ಯಾತ್ಮಿಕ ಅನುಭವವನ್ನು ಬಿತ್ತಿ, ಮಾನವನಲ್ಲಿ ಸಾಂತ್ವನ ನೀಡುವ ಧರ್ಮಗಳಾಗಿವೆ. ಈ ಪ್ರಮುಖ ಧರ್ಮಗಳು, ಮನುಷ್ಯನ ಜೀವನದಲ್ಲಿ ಸತ್ಯ, ಅಹಿಂಸೆ, ಪ್ರೀತಿ, ಜೀವನ ಮೌಲ್ಯಗಳನ್ನು ಬೋಧಿಸುತ್ತವೆ.

ಸಿಂಧೂ ನದಿಯ ಪ್ರದೇಶ, ಹಿಂದೂ ಸ್ಥಾನವೆಂತಲೂ, ಅದು ಮುಂದೆ ಹಿಂದೂ ದೇಶವಾಯಿತು ಎನ್ನಲಾಗಿದೆ. ಹಿಂದು ಎನ್ನುವ ಪದ ವೇದ–ಪುರಾಣ–ಉಪನಿಷತ್ತು ಇನ್ನಿತರೆ ಯಾವುದೇ ಧಾರ್ಮಿಕ ಕೃತಿಗಳಲ್ಲಿ ಬಳಸಿಲ್ಲ. ಸಿಂಧೂ ನದಿಯ ತೀರದಲ್ಲಿ ವಾಸಿಸುವವರು ಹಿಂದೂಗಳೆಂದು ಕರೆದಿರಬಹುದು. ಹಿಂದೂ ದೇಶದಲ್ಲಿ ಹುಟ್ಟಿ ಬೆಳೆದವರು, ಹಿಂದೂಗಳೆಂತಲೂ ಇವರು ಆಚರಿಸುವ ಧರ್ಮವೇ 'ಹಿಂದೂ'

ಧರ್ಮ ಎಂತಲೂ ಹೇಳಲಾಗಿದೆ.

ಮುಂದುವರೆದು, ಆರ್ಯರು ಭಾರತ ದೇಶಕ್ಕೆ ಆಗಮಿಸಿದ ನಂತರ ಸ್ಥಾಪಿಸಿದ ಧರ್ಮವೆಂದರೆ ಅದು ವೈದಿಕ ಧರ್ಮ ಅಥವಾ ಬ್ರಾಹ್ಮಣ ಧರ್ಮ. ಮುಂದೆ ಇದೇ ಹಿಂದೂ ಧರ್ಮದ ನಿಯಮವಾಗಿರಬೇಕು.

ಗೌತಮ ಬುದ್ಧನು ಕ್ರಿ. ಪೂ. 6ನೇ ಶತಮಾನದಲ್ಲಿ ಬೌದ್ಧಧರ್ಮವನ್ನು ಸ್ಥಾಪಿಸಿದ ಎನ್ನಲಾಗಿದೆ. ಹಿಂದೂ ಧರ್ಮದಲ್ಲಿದ್ದ ಮೂಢನಂಬಿಕೆ, ಕಂದಾಚಾರ, ಅಸಮಾನತೆಗಳನ್ನು ಪ್ರಶ್ನಿಸಿ ಹುಟ್ಟಿದ್ದೆ ಬೌದ್ಧ ಮತ್ತು ಜೈನಧರ್ಮ ಎಂದು ಇತಿಹಾಸಕಾರರು ತಿಳಿಸುತ್ತಾರೆ.

ಜೈನಧರ್ಮ ಅತಿಯಾದ ಅಹಿಂಸೆಯನ್ನು ಸಾರುತ್ತಾ ಕಠಿಣ ಧರ್ಮಾಚಾರಣೆಯನ್ನು ಅನುಸರಿಸುತ್ತಾ ಬಂದಿತು. ದಿಗಂಬರ ಮತ್ತು ಶ್ವೇತಾಂಬರರೆಂಬ ಎರಡು ಪಂಗಡಗಳು ಹುಟ್ಟಿಕೊಂಡವು.

ವಿಶ್ವದ ಒಟ್ಟು ಜನಸಮುದಾಯದಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮದ ಅನುಯಾಯಿಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇಸ್ರೇಲ್ ದೇಶದ ಬೆತ್ಲೆಹೇಮಿನಲ್ಲಿ ಜನಿಸಿದ 'ಏಸು' ಪವಾಡಪುರಷನೆಂದು ಆರಾಧಿಸುತ್ತಾರೆ. ಏಸು ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ಶಕ್ತಿವಂತನು ಎಂದು ಕ್ರೈಸ್ತಧರ್ಮ ಅನುಯಾಯಿಗಳು ನಂಬಿದ್ದಾರೆ. ಪ್ರವಾದಿ ಮಹಮದ್ ಪೈಗಂಬರ್ ಅವರಿಂದ ಸ್ಥಾಪಿಸಲ್ಪಟ್ಟ ಇಸ್ಲಾಂ ಧರ್ಮವು ಇಂದು ಜಾಗತಿಕವಾಗಿ ವಿಸ್ತಾರಗೊಂಡಿದೆ. ಇಸ್ಲಾಂ ಧರ್ಮದ ನಿಯಮದ ಪ್ರಕಾರ ಅಲ್ಲಾಹನಿಗೆ ಮಾತ್ರ ಪ್ರಾರ್ಥನೆ ಮಾಡಬೇಕು ಮತ್ತು ಅವನಿಗೆ ಮಾತ್ರ ತಲೆಬಾಗಬೇಕು. ಏಕೆಂದರೆ ಅವನು ಅತಿಮಾನುಷ ಶಕ್ತಿಯುವುಳ್ಳವನು ಎಂದು ನಂಬುತ್ತಾರೆ.

ಧರ್ಮ ಮನುಷ್ಯನಿಗಾಗಿ ಅಸ್ತಿತ್ವಕ್ಕೆ ಬಂದಿದೆಯೇ ಹೊರತು ಧರ್ಮಕ್ಕಾಗಿ ಮನುಷ್ಯ ಹುಟ್ಟಿಲ್ಲವೆಂಬುದು ಸಾರ್ವಕಾಲಿಕ ಸತ್ಯವಾಗಿದೆ. ಮಾನವರು ಧರ್ಮದ ಹೆಸರಿನಲ್ಲಿ ಮನುಷ್ಯ ಮನುಷ್ಯರ ನಡುವೆ ಅಡ್ಡಗೋಡೆಗಳನ್ನು ಕಟ್ಟಿಕೊಂಡಿದ್ದಾರೆ. ಧರ್ಮ ಧರ್ಮವೇ ಅಲ್ಲ ಅದೊಂದು ಮೂಢನಂಬಿಕೆಗಳು ಮತ್ತು ಕಂದಾಚಾರಗಳ ಕೊಚ್ಚೆಯಾಗಿದೆ. ಧರ್ಮವೆಂದರೆ ಅದು ಸಕಲ ಮಾನವರಿಗೆ ಲೇಸನ್ನು ಬಯಸುವ ಜೀವನ ವಿಧಾನವೆಂದು ಜಗತ್ತಿನ ಪ್ರಖ್ಯಾತ ತತ್ವಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ.

ಅಂಬೇಡ್ಕರ್ ಭಾರತದ ಒಬ್ಬ ಶ್ರೇಷ್ಠ ಪ್ರತಿಭಾವಂತ ಬುದ್ಧಿ ಜೀವಿ ಮತ್ತು ಮೇಧಾವಿ. ಪ್ರಪಂಚದ ಅಪ್ರತಿಮ ಚಿಂತಕರ ಸಾಲಿನಲ್ಲಿ ನಿಲ್ಲಬಲ್ಲ, ಮೇರು ವ್ಯಕ್ತಿತ್ವವುಳ್ಳ ಚಿಂತನಶೀಲ ವ್ಯಕ್ತಿ. ಅವರು ಜಗತ್ತಿನ ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಆಸಕ್ತಿ ಮತ್ತು

ಕುತೂಹಲದಿಂದ ಅಮೂಲಾಗ್ರವಾಗಿ ಅಧ್ಯಯನ ಮಾಡಿದ್ದರು. ಧರ್ಮವನ್ನು ಕುರಿತಂತೆ ರಾಬರ್ಟ್ ಸನ್ ಸ್ಮಿತ್ ಅವರ ಪರಿಕಲ್ಪನೆಯನ್ನು ಅಂಬೇಡ್ಕರ್ ಹಿಂದೂ ಧರ್ಮದ ತತ್ವಜ್ಞಾವನ್ನು ಕುರಿತ ತಮ್ಮ ಕೃತಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ. "ಧರ್ಮದ ಪರಂಪರಾಗತ ಪದ್ಧತಿಯು ಕ್ರಮೇಣ ಅನೇಕ ಶತಮಾನಗಳಲ್ಲಿ ಬೆಳೆದು ಬಂದಿದೆ. ಮನುಷ್ಯನ ಆಲೋಚನೆಯ ರೀತಿಗಳಲ್ಲಿ ಬೌದ್ಧಿಕ ಮತ್ತು ನೈತಿಕ ಬೆಳವಣಿಗೆಯ ವಿವಿಧ ಹಂತಗಳ ವೈಲಕ್ಷಣ್ಯಗಳಲ್ಲಿ ಇದು ಪ್ರತಿಫಲನಗೊಂಡಿದೆ. ಅನಾಗರೀಕ ಸಂಸ್ಕೃತಿಯ ಆದಿಮ ಸ್ಥಿತಿಯಿಂದ ಆರಂಭಿಸಿ ಕ್ಷುದ್ರ ದೇವತಾರಾಧನೆಯಲ್ಲಿ ಮುಂದುವರೆದು ಕ್ರಮವಾಗಿ ಪೂರ್ವಿಕರಿಂದ ಅನುವಂಶಿಕವಾಗಿ ಬೆಳೆದುಬಂದಿರುವ ಸಂಕೀರ್ಣ ಬಗೆಯ ಆಚರಣೆಗಳು ಆರಾಧನೆಗಳೆಲ್ಲದರ ವಿಚಾರ ಸರಣಿಯನ್ನು ಮತ್ತು ದೇವರುಗಳ ಸ್ವರೂಪವನ್ನು ಯಾವ ತತ್ವವೂ ಖಚಿತವಾಗಿ ವಿವರಿಸಲು ಸಾಧ್ಯವಾಗುವುದಿಲ್ಲ. ಧಾರ್ಮಿಕ ಸಂಸ್ಥೆಗಳು ಗರ್ಭೀಕರಿಸಿಕೊಂಡಿರುವ ಮಾನವ ಕೋಟಿಯ ಧರ್ಮ ಸಂಬಂಧಿಯಾದ ವಿಚಾರಗಳ ಸ್ವರೂಪವು ಭೂಗರ್ಭ ಇತಿಹಾಸದ ದಾಖಲೆಗಳನ್ನು ಹೋಲುವಂತಿದ್ದು, ಭೂಮಿಯ ಮೇಲುಪದರದೊಳಗೆ ಪಕ್ಕ ಪಕ್ಕದಲ್ಲಿ ಅಥವಾ ಪದರು ಪದರುಗಳಲ್ಲಿ ಹುದುಗಿರುವ ಈ ದಾಖಲೆಗಳಂತೆ ಧರ್ಮದ ಹಳೆಯ ಮತ್ತು ಹೊಸ ಸಂಗತಿಗಳು ಮಾನವನ ವಿಚಾರಗಳಲ್ಲಿ ಸೇರಿ ಹೋಗಿದೆ" ಎನ್ನುತ್ತಾರೆ.

ಧರ್ಮ ಯಾವುದೇ ಕಾರಣಕ್ಕೂ ದುರ್ಬಲರನ್ನು ಶೋಷಿಸುವ ಅಸ್ತ್ರವಾಗಬಾರದು. ಹಿಂದೂ ಧಾರ್ಮಿಕ ವ್ಯವಸ್ಥೆಯಲ್ಲಿ ದೈವಿಕ ಪ್ರಭುತ್ವದ ಲಿಖಿತ ಸಂವಿಧಾನ ಮತ್ತು ಪುರೋಹಿತಶಾಹಿಯ ಅಘೋಷಿತ ಪ್ರಾಬಲ್ಯವನ್ನು ಕಾಪಾಡಿಕೊಂಡು ಬರಲಾಗಿದೆ. ಈ ಧರ್ಮದಲ್ಲಿ ಬಹುಸಂಖ್ಯಾತ ಹಿಂದುಳಿದ ಸಮುದಾಯಗಳ ಜನತೆ ಸಮಾನತೆಯಿಂದ ವಂಚಿತಾಗಿದ್ದಾರೆ. ಇಂತಹ ಧಾರ್ಮಿಕ ಕಟ್ಟುಪಾಡುಗಳು ಭಾರತೀಯ ಸಮಾಜದಲ್ಲಿ ಬಹುಜನ ಬಂಧುಗಳಿಗೆ ಉಸಿರು ಕಟ್ಟಿಸುವಂತಹ ವಾತಾವರಣವನ್ನು ನಿರ್ಮಿಸಿವೆ. ಹಿಂದೂಧರ್ಮದ ಸಿದ್ಧಾಂತಗಳನ್ನು ವಂಶಪಾರಂರ್ಯವಾಗಿ ಪಡೆಯುವ ಚರಾಸ್ತಿಯಂತೆ ವೈದಿಕಶಾಹಿ ಸಂರಕ್ಷಿಸಿದೆ. ಇಂತಹ ಧರ್ಮ ಪ್ರಕೃತಿ ಧರ್ಮಕ್ಕೆ ತದ್ವಿರುದ್ಧವಾಗಿದೆ.

ಅಂಬೇಡ್ಕರ್ ಅಪ್ಪಟ ಮಾನವತಾವಾದಿಯಾಗಿದ್ದು ಶೋಷಿತ ವರ್ಗದ ಸಬಲೀಕರಣಕ್ಕೆ ತಮ್ಮ ಇಡೀ ಬದುಕನ್ನೇ ಮುಡಿಪಾಗಿಟ್ಟಿದ್ದರು. ಹಿಂದೂ ಧಾರ್ಮಿಕ ವಿಚಾರಧಾರೆಗಳನ್ನು ಅಮೂಲಾಗ್ರವಾಗಿ ಸಂಶೋಧಿಸಿ ಇವುಗಳು ಕೇವಲ ಕಟ್ಟುಕಥೆಗಳು ಮತ್ತು ಜೀವನ ವಿರೋಧಿ ಪರಿಕಲ್ಪನೆಗಳೆಂಬ ತೀರ್ಮಾನಕ್ಕೆ ಅಂಬೇಡ್ಕರ್ ಬಂದಿದ್ದರು. ಜಾತಿ ವಿನಾಶದಿಂದ ಭಾರತ ದೇಶ ವಿಶ್ವದಲ್ಲಿ ಪ್ರಬುದ್ಧ ದೇಶವಾಗುತ್ತದೆಂಬ ಅಚಲ ನಂಬಿಕೆಯನ್ನು ಹೊಂದಿದ್ದರು. ಬುದ್ಧನ ವೈಚಾರಿಕತೆಯಿಂದ ಅಂಬೇಡ್ಕರ್

ಪ್ರಭಾವಿತರಾಗಿ ಅಲೌಕಿಕ ವಿಚಾರಗಳನ್ನು ಖಂಡಿಸಿ ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವಂತಹ ಜಾತಿವಿನಾಶ ಚಳವಳಿಯನ್ನು ಭಾರತದಲ್ಲಿ ಕಟ್ಟಿ ಬೆಳೆಸಿದರು. ಹಿಂದೂ ಧರ್ಮವೆಂಬುದು ಕುರುಡು ನಂಬಿಕೆಗಳ ಕಂತೆಯಾಗಿದೆ ಎಂದು ಪ್ರತಿಪಾದಿಸಿದರು.

ಆರ್ಯರು ಹಿಂದಿನಿಂದಲೂ ತಮ್ಮ ಹಿತರಕ್ಷಣೆಗೆ ತಕ್ಕಂತೆ ರಚಿಸಿದ ಧರ್ಮ ಶಾಸ್ತ್ರಗಳಾದ ವೇದಗಳನ್ನು ಸಾಕ್ಷಾತ್ ಬ್ರಹ್ಮನೇ ಹೇಳಿರುವನಂತೆಯೂ, ಭಗವದ್ಗೀತೆಯನ್ನು ಕೃಷ್ಣ ಪರಮಾತ್ಮನೇ ಬೋಧಿಸಿರುವನಂತೆಯೂ ಭಾರತೀಯ ಪುರೋಹಿತ ವರ್ಗವು ಹೇಳುತ್ತಲೇ ಬಂದಿದೆ. ಇವುಗಳನ್ನು ಸಮರ್ಥಿಸಲು ಋಷಿಗಳಿಂದ ಋಷಿಗಳಿಗೆ ಸ್ಮೃತಿಯಿಂದ ಪಸರಿಸಿದ ಧರ್ಮ ನೀತಿ ಶಾಸ್ತ್ರವನ್ನು ಮನವು ಮನುಸ್ಮೃತಿಯಾಗಿ ರಚಿಸಿದ್ದಾನೆ ಎಂದು ಹೇಳಲಾಗುತ್ತಿದೆ. ಹೀಗೆ ನಯ ವಂಚನೆ ಮಾಡುತ್ತಾ ಜನ ಸಾಮಾನ್ಯರನ್ನು ವಂಚಿಸಿ ಬದುಕುತ್ತಿದ್ದ ವೈದಿಕರ ಕುರುಡುತನವನ್ನು ಸಹಿಸದ ಅನೇಕ ಬುದ್ಧಿಜೀವಿಗಳು ಸಮಾನತೆಯ ತತ್ವದ ಆಧಾರದ ಮೇಲೆ ಹೊಸಧರ್ಮವನ್ನು ಸೃಷ್ಟಿಮಾಡಿ ಸಮಾಜದಲ್ಲಿ ಸಮಾನತೆ ಮತ್ತು ಭ್ರಾತೃತ್ವ ಪ್ರೇಮವನ್ನು ನೆಲೆಗೊಳಿಸಿದರು. ಅವರಲ್ಲಿ ಪ್ರಮುಖರು ಗೌತಮ ಬುದ್ಧ, ಮಹಾವೀರ, ಬಸವಣ್ಣ ಮತ್ತು ಗುರುನಾನಕ್ ಮುಂತಾದವರು ಎನ್ನುತ್ತಾರೆ.

ಹಿಂದೂ ಧರ್ಮವನ್ನು ಹಾಳು ಮಾಡಿರುವುದು ಪುರೋಹಿತ ಧರ್ಮ ಎಂದು ಬಾಬಾ ಸಾಹೇಬ ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದಾರೆ. ಪ್ರೊ. ಮಾಕ್ಸ್ ಮುಲ್ಲರ್ ಅವರ ಪ್ರಕಾರ "ಹಿಂದು ಧರ್ಮ ಜಾತಿ ಪದ್ಧತಿಯ ಮೇಲೆ ನಿಂತಿದೆ; ಹೆಬ್ಬಂಡೆಯಂತಿರುವ ಅದನ್ನು ಯಾವ ವಾದಗಳಿಂದಲೂ ಅಲುಗಾಡಿಸಲು ಸಾಧ್ಯವಿಲ್ಲ" ಎಂದಿದ್ದಾರೆ. ಸರ್ ಆಲ್ಫ್ರಡ್ ಲ್ಯಾಲ್ ಅವರ ಪ್ರಕಾರ "ಹಿಂದೂ ಧರ್ಮವೆಂದರೆ ಗೊಂದಲಮಯ. ಮೂಢ ನಂಬಿಕೆಗಳ, ಹಕ್ಕುಗಳ, ಕ್ರೌರ್ಯೀಕರಣದ, ಆರಾಧನೆಗಳ, ಸಂಪ್ರದಾಯ ಮತ್ತು ಪುರಾಣಗಳ ಅಸ್ತವ್ಯಸ್ತ ಕಗ್ಗಂಟು; ಇವುಗಳಿಗೆ ಬ್ರಾಹ್ಮಣರ ಧರ್ಮ ಗ್ರಂಥಗಳು ಮತ್ತು ಇವುಗಳನ್ನು ಬ್ರಾಹ್ಮಣರ ಉಪದೇಶಗಳಿಂದ ಪ್ರಚಾರಪಡಿಸಲಾಗಿದೆ" ಎಂದು ವ್ಯಾಖ್ಯಾನಿಸಿದ್ದಾರೆ.

ಭಾರತದ ದೇವರುಗಳು ಪೂಜಾರಿಗಳೇ ಹುಟ್ಟಿಸಿದ ದೇವರುಗಳಾಗಿದ್ದು ಇವರನ್ನು ನಂಬಿ ಕೆಟ್ಟವರೇ ಶೂದ್ರಾತಿ ಶೂದ್ರರೆಂದು ಅಂಬೇಡ್ಕರ್ ವಾದಿಸಿದರು. ಮಹಿಳೆಯರು ಮತ್ತು ದುರ್ಬಲ ವರ್ಗಗಳನ್ನು ನಿರಂತರವಾಗಿ ದಾಸ್ಯಕ್ಕೆ ಗುರಿಮಾಡುವ ಹಿಂದೂ ಧಾರ್ಮಿಕ ಮೂಲಭೂತವಾದ ಭಾರತಕ್ಕೆ ಬಹುದೊಡ್ಡ ಅಪಾಯ ಮತ್ತು ಕಳಂಕವೆಂದು ಅಂಬೇಡ್ಕರ್ ಸಾರಿ ಹೇಳಿದರು. ಬುದ್ಧನ ಕಾಲದ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಒಳಗೊಳ್ಳುವ ಅಭಿವೃದ್ಧಿ ಮತ್ತು ದೇಶದ ಸಮಗ್ರ

ಅಭಿವೃದ್ಧಿಗಾಗಿ ವೈಚಾರಿಕತೆ ಅತ್ಯವಶ್ಯಕವೆಂದು ಅಂಬೇಡ್ಕರ್ ಧಾರ್ಮಿಕ ಚಿಂತನೆಯಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ.

ಅಶೋಕನ ಚಕ್ರವರ್ತಿಯ ಕಾಲದಲ್ಲಿ ಭಾರತ ಸಮೃದ್ಧ ರಾಷ್ಟ್ರವಾಗಿತ್ತು. ಬೌದ್ಧ ಧರ್ಮ ರಾಷ್ಟ್ರೀಯ ಧರ್ಮವಾಗಿತ್ತು. ವರ್ಗ, ವರ್ಣ, ಲಿಂಗ ಭೇದವಿಲ್ಲದೆ ಸಮಷ್ಠಿಯನ್ನು ಸಮಾಜದಲ್ಲಿ ಸೃಷ್ಠಿ ಮಾಡಿ, ಶಾಂತಿ ಸಮೃದ್ಧಿಯನ್ನು ಕಾಪಾಡಿದ್ದು ಬೌದ್ಧ ಧರ್ಮ. ಮೌರ್ಯರ ಸುಪ್ರಸಿದ್ಧ ರಾಜ ಅಶೋಕ ಚಕ್ರವರ್ತಿಯ ಮೊಮ್ಮಗ ಬೃಹದ್ರತನನ್ನು ಕ್ರಿ. ಪೂ. 185ರಲ್ಲಿ ಪುಷ್ಯಮಿತ್ರ ಶುಂಗನೆಂಬ ಬ್ರಾಹ್ಮಣನು ಸಾಮವೇದಿ ಮೋಸದಿಂದ ಸಂಹರಿಸಿ, ತಾನೇ ರಾಜನಾದನು. ಅಶೋಕ ಚಕ್ರವರ್ತಿ ಕಾಲದಲ್ಲಿ ಅಳಿಸಿ ಹೋಗಿದ್ದ ಬ್ರಾಹ್ಮಣ ಧರ್ಮವನ್ನು ಪುನರುತ್ಥಾನಗೊಳಿಸಲು 'ಮನುಸ್ಮೃತಿ' ಎಂಬ ಧರ್ಮಶಾಸ್ತ್ರವನ್ನು ಬರೆಯಿಸಿದನು.

ಅಂಬೇಡ್ಕರ್ ಧಾರ್ಮಿಕತೆಗಿಂತ ಆಧ್ಯಾತ್ಮಿಕತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು. ಅವರು ಬುದ್ಧನ ವಿಚಾರಧಾರೆಗಳಿಂದ ಪ್ರಧಾನವಾಗಿ ಆಕರ್ಷಿತರಾಗಿದ್ದರು. ಅಲ್ಲದೇ ಲಿಂಕನ್, ಬುಕರ್, ವಾಷಿಂಗ್ಟನ್, ಜಾನ್ ಸ್ಟುವರ್ಟ್, ಮಿಲ್ ಅವರಂತಹ ಪಾಶ್ಚಾತ್ಯ ಉದಾರವಾದಿ ಚಿಂತಕರು ಹಾಗು ಪುಲೆ, ರಾನಡೆ, ಗೋಖಲೆಯವರಂತಹ ಉದಾರವಾದಿಗಳ ಪ್ರಭಾವದಲ್ಲಿ ತಮ್ಮ ಅನನ್ಯ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಅವರ ಆಧ್ಯಾತ್ಮಿಕ ಚಿಂತನೆಗಳನ್ನು ಭಾರತೀಯ ಸಂವಿಧಾನ ಪ್ರಧಾನವಾಗಿ ಒಳಗೊಂಡಿದೆ. ಆಧ್ಯಾತ್ಮಿಕ ಪುರುಷರಾಗಿ ಅಂಬೇಡ್ಕರ್‌ರು ಸಮಾಜದ ಸಮಗ್ರ ವಿಕಾಸಕ್ಕೆ ಪೂರಕವಾದ ಮಾನವೀಯ ಚಿಂತನೆಗಳನ್ನು ಒದಗಿಸಿಕೊಟ್ಟಿದ್ದಾರೆ. ಸಾಮಾಜಿಕ ಅವ್ಯವಸ್ಥೆಯೇ ಭಾರತದ ಎಲ್ಲಾ ಅನಿಷ್ಟಗಳಿಗೆ ಮೂಲವೆಂದು ಅಂಬೇಡ್ಕರ್ ವಾದಿಸಿದ್ದಾರೆ.

ದಲಿತರಿಗೊಂದು ಚರಿತ್ರೆ ಇದೆಯೆಂದು ಮೊದಲ ಬಾರಿಗೆ ಮಾನವಶಾಸ್ತ್ರಜ್ಞರಂತೆ ಅಧಿಕೃತವಾಗಿ ಮಂಡಿಸಿದ ಗೌರವ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಭಾರತದಲ್ಲಿ ಬಹುಸಂಖ್ಯಾತ ಶೋಷಿತ ವರ್ಗಗಳ ಬದುಕನ್ನು ಕಸಿದುಕೊಂಡಿರುವ ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಬೌದ್ಧ ಧರ್ಮವನ್ನು 20ನೇ ಶತಮಾನದಲ್ಲಿ ಸಮರ್ಥಿಸಿ ಅಂಬೇಡ್ಕರ್ ಶ್ರೇಷ್ಠ ಆಧ್ಯಾತ್ಮಿಕ ಶಕ್ತಿಯಾಗಿ ರೂಪುಗೊಂಡಿದ್ದಾರೆ. ಬುದ್ಧನ ಆಧ್ಯಾತ್ಮಿಕ ದೃಷ್ಟಿಯ ನೆಲಗಟ್ಟಿನ ಮೇಲೆ, ಪ್ರೀತಿ, ಕರುಣೆ, ಮೈತ್ರಿಯ ಆಧಾರದ ಮೇಲೆ ಭಾರತದ ಇತಿಹಾಸವನ್ನು ಪುನರ್ ರೂಪಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಆಧ್ಯಾತ್ಮಿಕ ಚಿಂತನೆ ಸಾರ್ವಕಾಲೀಕ ಪ್ರಸ್ತುತತೆ ಹೊಂದಿದೆ. ಆಧುನಿಕ ಭಾರತದಲ್ಲಿ ಅಂಬೇಡ್ಕರ್ ಅವರು ಮನುಕುಲಕ್ಕೆ ಮತ್ತು ಅದರ ಅಭ್ಯುದಯದ ಮಾರ್ಗದರ್ಶಕರಾಗಿ ಇದ್ದಾರೆ.

ಭಾರತೀಯ ಬೌದ್ಧ ಜನ ಸಮಿತಿಯ ಕಾರ್ಯದರ್ಶಿ ಗೋಡ್ ಬೋಲೆ

ಅವರು ನಾಗಪುರದಲ್ಲಿ 14 ಎಕರೆ ವಿಶಾಲವಾದ ಭೂ ಪ್ರದೇಶದಲ್ಲಿ ಬೌದ್ಧ ಧರ್ಮ ದೀಕ್ಷಾ ಸಮಾರಂಭವನ್ನು ಆಯೋಜಿಸಿದರು.''ಬಾಬಾ ಸಾಹೇಬರ ಸಿಂಹಗರ್ಜನೆಯನ್ನು ಕೇಳೀರಿ, ಬೌದ್ಧ ಧರ್ಮ ಸೇರಿಕೊಳ್ಳಿರಿ'' ಎಂಬ ಘೋಷ ವಾಕ್ಯ ಕೂಗುತ್ತಾ ಜನ ತಂಡೋಪತಂಡವಾಗಿ ಸೇರತೊಡಗಿದರು. ''ಹಿಂದೂ ಧರ್ಮದ ನರಕದಿಂದ ಹೊರಬೀಳಿರಿ ಬೌದ್ಧಧರ್ಮ ಸೇರಿಕೊಳ್ಳಿರಿ'' ಎಂಬ ಮತ್ತೊಂದು ಘೋಷಣೆ ಕೇಳಿಬರುತ್ತಿತ್ತು. ಸುಮಾರು ಐದು ಲಕ್ಷಜನ ಸಾಗರದ ಸಮಕ್ಷಮದಲ್ಲಿ ದೀಕ್ಷಾ ವಿಧಿಯನ್ನು ಮಹಾ ಥೇರಾ ಚಂದ್ರಮಣಿ ಕುಶಿನಾರಾರವರು ಅಂಬೇಡ್ಕರ್ ಮತ್ತು ಅವರ ಪತ್ನಿಯವರಿಗೆ ದೀಕ್ಷೆ ನೀಡಿದರು. ತ್ರಿಶರಣ, ಪಂಚಶೀಲವನ್ನು ಬೋಧಿಸಿದರು. ಅನಂತರ ಬುದ್ಧನಿಗೆ ಅಂಬೇಡ್ಕರ್ ದಂಪತಿಗಳು ಮೂರು ಬಾರಿ ನಮಿಸಿದರು. ''ಅಸಮಾನತೆಯನ್ನು ಮತ್ತು ಶೋಷಣೆಯನ್ನು ಎತ್ತಿ ಹಿಡಿಯುವ ನನ್ನ ಹುಟ್ಟಿನ ಧರ್ಮವನ್ನು ತಿರಸ್ಕರಿಸಿ, ನಾನು ಇಂದು ಬೌದ್ಧ ಧರ್ಮ ಸ್ವೀಕರಿಸಿದ್ದೇನೆ' ನಾನು ಹಿಂದೂ ದೇವತೆಗಳನ್ನು ಪೂಜಿಸುವುದಿಲ್ಲ. ಶ್ರಾದ್ಧ ಕರ್ಮಾದಿಗಳನ್ನು ಮಾಡುವುದಿಲ್ಲ. ಬುದ್ಧ ಬೋಧಿಸಿದ ಅಷ್ಟಾಂಗ ಮಾರ್ಗಗಳನ್ನು ನಾನು ಕಟ್ಟುನಿಟ್ಟಾಗಿ ಅನುಸರಿಸುತ್ತೇನೆ ಎಂದು ಪ್ರಮಾಣ ಮಾಡಿ ಅಂಬೇಡ್ಕರ್ ಅವರು ಸ್ವತ: ತಾವೇ ರೂಪಿಸಿದ್ದ 22 ನಿಯಮಗಳನ್ನು ಗಟ್ಟಿಯಾಗಿ ಓದಿ ಹೇಳಿದರು. ಈ ನಿಯಮಗಳನ್ನು ಒಪ್ಪುವವರು ಜನಸ್ತೋಮದಲ್ಲಿ ಎದ್ದು ನಿಲ್ಲಬೇಕೆಂದು ಅಂಬೇಡ್ಕರ್ ವಿನಂತಿಸಿಕೊಂಡರು. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಜನರು ಎದ್ದು ನಿಂತರು. ತ್ರಿಶರಣ ಮತ್ತು ಪಂಚಶೀಲವನ್ನು ಜನಸ್ತೋಮಕ್ಕೆ ಅಂಬೇಡ್ಕರ್ ಬೋಧಿಸಿದರು.

**ಪರಾಮರ್ಶನ ಗ್ರಂಥಗಳು:**

1. ಅಭಿನಂದನ, (2012), ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್, ಕೃಷಿ ವಿಕಾಸ್ ಪಬ್ಲಿಕೇಷನ್, ಬೆಂಗಳೂರು.
2. ಅಶೋಕ ಎ. ಬಿ. , (2014), ಕಣ್ಣು ನೀಡಿದ ಕಣ್ಮಣಿ, ರತ್ನಮಾಲಾ ಪ್ರಕಾಶನ, ಬೀದರ.
3. ರಾಜಣ್ಣ ಓ. , (2014), ವಿಶ್ವವ್ಯಾಪ್ತಿ ಅಂಬೇಡ್ಕರ್‌ವಾದ, ಲೈಟ್ ಆಫ್ ಏಷಿಯ ಪಬ್ಲಿಕೇಷನ್, ಬೆಂಗಳೂರು.
4. ಮಾಯಿಗೌಡ ಕೆ. , (2014), ಅಂಬೇಡ್ಕರ್ ದೃಷ್ಟಿಯಲ್ಲಿ ಮನು, ಸಪ್ನ ಬುಕ್ ಹೌಸ್ ಬೆಂಗಳೂರು.
5. ಜಾಕೋಬ್ ಲೋಬೊ ಸಿ. ಎಚ್. , (2015), ಭಾರತ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್, ಸಪ್ನಾ ಬುಕ್ ಹೌಸ್, ಬೆಂಗಳೂರು.
6. ಶಾಸ್ತ್ರಿ ಜಿ. ವಿ. , (2000), ಡಾ. ಬಿ.ಆರ್. ಅಂಬೇಡ್ಕರ್ (ಜೀವನ ಚರಿತ್ರೆ), ಪಾರು ಪ್ರಕಾಶನ, ಗದಗ.

7. ಭಗವಾನ್ ಕೆ. ಎಸ್. , (2014), ಭಾರತದ ಬೇಸಾಯಗಾರರೆಲ್ಲ ಬೌದ್ಧರು, ಅಭಿಶ್ರುತಿ ಪ್ರಕಾಶನ, ಮೈಸೂರು.
8. ಬಂಧು ಸಿದ್ಧೇಶ್ವರಕರ್ ಕೆ. ಎಸ್. (ಸಂ), (2013), ಭೀಮ ಗರ್ಜನೆ (ಕವನ ಸಂಕಲನ), ಸಿದ್ಧಾರ್ಥ ಪ್ರಕಾಶನ, ಗುಲಬರ್ಗಾ.
9. ಚರಣಕುಮಾರ್, (2012), ಅಂಬೇಡ್ಕರ್ ಅವರ ನುಡಿಮುತ್ತುಗಳು, ಅಮ್ಮ ಪ್ರಕಾಶನ, ಮೈಸೂರು.
10. ಜೆ. ಸು. ನಾ. , (2007), ಅಂಬೇಡ್ಕರ್ ಮಹಾಶಯ, ಐಬಿಎಚ್ ಪ್ರಕಾಶನ, ಬೆಂಗಳೂರು.
11. ಅಪ್ಪುಗೆರೆ ಸೋಮಶೇಖರ್, (2015), ಸಾಕ್ಷಿಪ್ರಜ್ಞೆ ದಲಿತತ್ವದ ನೆಲೆಗಳು, ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ, ಕಲಬುರ್ಗಿ.
12. ವಿದ್ಯಾಸಾಗರ ಐ. ಎಸ್. , (2006), ಅಂಬೇಡ್ಕರ್ ಮತ್ತು ಮಾನವೀಯ ಮೌಲ್ಯಗಳು, ಸುಮೇಧ ಪ್ರಕಾಶನ, ಗುಲಬರ್ಗಾ.
13. ಶ್ರೀನಿವಾಸಮೂರ್ತಿ ಕಾ. ವೆಂ. , ಕುಮಾರ್ ಸಮತಳ, ನಾರಾಯಣ ಕೆ. ಕ್ಯಾಸಂಬಳಿ (ಸಂ), (2011), ಹೋರಾಟದ ನೂರು ಹಾಡುಗಳು, ಕರ್ನಾಟಕ ಜನಶಕ್ತಿ ಪ್ರಕಾಶನ, ಬೆಂಗಳೂರು.
14. ಹರೀಶ ಜಿ. ಬಿ. , (2016), ಎಲ್ಲರಿಗೂ ಬೇಕಾದ ಅಂಬೇಡ್ಕರ್, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.
15. ಲೋಖಂಡೆ ಜಿ. ಎಸ್. , ಜಾಕೋಬ್ ಲೋಖಂಡೆ ಸಿ. ಎಚ್. (2014), ಭೀಮರಾವ್ ರಾಮಜೀ ಅಂಬೇಡ್ಕರ್, ಸಪ್ನ ಬುಕ್ ಹೌಸ್, ಬೆಂಗಳೂರು.
16. ಜಯದೇವಿ ಗಾಯಕವಾಡ, (2006), ಬಸವಣ್ಣ–ಅಂಬೇಡ್ಕರ್, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.
17. ಜಯದೇವಿ ಗಾಯಕವಾಡ, (2002), ಪ್ರಾಚೀನ ಬೌದ್ಧ ವಿದ್ಯಾಕೇಂದ್ರ: ಸನ್ನತಿ, ಅಮರ ಪ್ರಕಾಶನ, ಗುಲಬರ್ಗಾ.
18. ಭಾಸ್ಕರ್ ಟಿ. ಎಂ. , (2003), ಅಂಬೇಡ್ಕರ್ ವಾದ: ದಲಿತರು, ಮರುಗ ಪ್ರಕಾಶನ, ಗುಲಬರ್ಗಾ.
19. ಭಾಸ್ಕರ್ ಟಿ. ಎಂ. , (2003), ಬುದ್ಧ ಚಿಂತನೆ, ಮರುಗ ಪ್ರಕಾಶನ, ಗುಲಬರ್ಗಾ.
20. ಭಾಸ್ಕರ್ ಟಿ. ಎಂ. , (2004) ಮಾತಾಡುವ ಎಲುಬುಗಳು, ಮರುಗ ಪ್ರಕಾಶನ, ಗುಲಬರ್ಗಾ.
21. ಭಾಸ್ಕರ್ ಟಿ. ಎಂ. , (2017), ನೀರು ಬೇಕು ನೀರು, ವಸಂತ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.